ಸ್ವಾನುಭವದ ಜೊತೆಗೆ ಭೂತ ಮತ್ತು ವರ್ತಮಾನಗಳ ಸಾಮಾಜಿಕ–ಸಾಂಸ್ಕೃತಿಕ ಇತಿಹಾಸದ ಒತ್ತಾಸೆಯೂ ಅದಕ್ಕಿರುತ್ತದೆ. ಸೃಷ್ಟಿಕ್ರಿಯೆಯ ಸಂದರ್ಭದಲ್ಲಿ ನಮ್ಮ ಅನುಭವಕ್ಕೆ ಹೊಂದದ ವೈಚಾರಿಕತೆ ಎದುರಿಗಿದ್ದರೆ ಪರಸ್ಪರ ಸಂಧಿಸಿ, ಸಂವಾದಿಸಿ ನಿಜದ ನೆಲೆಯ ಶೋಧ ನಡೆಸುವುದು ಮುಖ್ಯವಾಗುತ್ತದೆ. ಇದು ಮನಸ್ಸು (ಅನುಭವ) ಮತ್ತು ಮೆದುಳು(ವೈಚಾರಿಕತೆ)ಗಳ ಸಾವಯವ ಸಂಬಂಧದಲ್ಲೇ ಅನುಭವಕ್ಕೊಂದು ವೈಚಾರಿಕ ನೆಲೆ, ಹಾಗೂ ವೈಚಾರಿಕತೆಗೊಂದು ಅನುಭವದ ಒರೆಗಲ್ಲು ಲಭ್ಯವಾಗುತ್ತದೆ. ನನ್ನ ಸಾಹಿತ್ಯ ಮತ್ತು ಸಿನಿಮಾಗಳ ಸೃಷ್ಟಿಯಲ್ಲಿ ಅನುಭವ ಮತ್ತು ವೈಚಾರಿಕತೆಗಳ ಸಾವಯವ ಸಂಬಂಧವನ್ನು ಸಾಧಿಸಲು ಸದಾ ಪ್ರಯತ್ನಿಸುತ್ತೇನೆ. ಇದು ಭಾವುಕ ಮತ್ತು ಬೌದ್ಧಿಕ ಏಕತೆಯ ಪ್ರಾಮಾಣಿಕ ಪ್ರಕ್ರಿಯೆ. ಕುವೆಂಪು ಅವರು ಹೇಳುವಂತೆ ಇದು 'ಭಾವಬುದ್ಧಿಗಳ ವಿದ್ಯುದಾಲಿಂಗನ'.

- **ಒಂದು ಚಾರಿತ್ರಿಕ ಮತ್ತು ಸಾಂಸ್ಕೃತಿಕ ಮಹತ್ವ ನಿಮಗೆ ಸಿಕ್ಕಿದೆ. ಆದರೆ, ಇಂಥದ್ದೇ ಮಹತ್ವ ನಿಮ್ಮ ಕೃತಿಗಳಿಗೆ ಸಿಕ್ಕಿದೆಯೆಂದು ಅನ್ನಿಸಿದೆಯೆ? ಹಾಗಾದರೆ, ಕನ್ನಡ ವಿಮರ್ಶಾ ವಲಯ ನಿಮ್ಮ ಕೃತಿಗಳ ಕುರಿತು ನಡೆಸಿದ ಚರ್ಚೆ ಬಗ್ಗೆ ಏನನ್ನಿಸುತ್ತದೆ?**

ನೋಡಿ ವಿಕ್ರಂ, ನೀವು ಹೇಳಿದಂತೆ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಮಹತ್ವವು ನನಗೆ ಸಿಕ್ಕಿದೆ ಎಂದಾದರೆ ಅದರಲ್ಲಿ ನನ್ನ ಕೃತಿಗಳ ಪಾಲೂ ಇದೆಯೆಂದಾಯಿತಲ್ಲವೆ. ಆದರೆ, ಚಾರಿತ್ರಿಕ ಮತ್ತು ಸಾಂಸ್ಕೃತಿಕ ಮಹತ್ವದಲ್ಲಿ ಕೃತಿಗಳ ಪಾಲಿನಷ್ಟೇ ಕ್ರಿಯೆಯ ಪಾಲೂ ಇದೆ. ಕೃತಿ ಮತ್ತು ಕ್ರಿಯೆ ಎರಡೂ ನನ್ನ ಬದುಕಿನ ಭಾಗ. ನಾನು ಒಂದು ಕೃತಿಯಿಂದಲೇ ಎಲ್ಲವೂ ಸಾಧ್ಯವಾಗುತ್ತದೆಯೆಂದು ಭಾವಿಸಿದವನಲ್ಲ. ನನ್ನಂಥವರಿಗೆ ಕೃತಿ ರಚನೆಯೂ ಒಂದು ಸೃಜನಶೀಲ ಚಳವಳಿ ಇದ್ದಂತೆ. ಹೀಗಾಗಿ ಬರೆಯುತ್ತ, ಬರೆದಂತೆ ಬದುಕುತ್ತ, ಬದುಕು ಮತ್ತು ಬರಹಗಳ ಸಾವಯವ ಸಂಬಂಧದಲ್ಲಿ ಪ್ರಾಮಾಣಿಕ ಕ್ರಿಯಾ ಪ್ರಕ್ರಿಯೆಯಲ್ಲಿ ತೊಡಗುವುದು ನನ್ನ ನಿರಂತರ ಆಶಯ. ಈ ಆಶಯದ ಅಭಿವ್ಯಕ್ತಿಯು ಕೃತಿ ಮತ್ತು ಕ್ರಿಯೆ ಎರಡರಲ್ಲೂ ಕಾಣಿಸಿದ್ದರೆ ಸಾಕು. ಇನ್ನು, ಕೃತಿಗಳನ್ನು ಕುರಿತ ವಿಮರ್ಶೆ ಕುರಿತಂತೆ ಹೇಳುವುದಾದರೆ ನಾನು 'ಪ್ರತಿಷ್ಠಿತರ ಪೂರ್ವಗ್ರಹದ ಪಾಪದ ಕೂಸು' ಎಂದು ಎಷ್ಟೋ ಸಾರಿ ಅನ್ನಿಸಿದ್ದುಂಟು. ನನ್ನ ಮೊದಲನೇ ಕಥಾಸಂಕಲನಕ್ಕೆ (ಸುಂಟರಗಾಳಿ) 1975–76ರಲ್ಲೇ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪುಸ್ತಕ ಬಹುಮಾನ ಬಂದಿತ್ತು. ನಾನು ಬಂಡಾಯ ಸಾಹಿತ್ಯ ಚಳವಳಿಯ ಪ್ರಮುಖನಾಗಿ ಕಾಣಿಸಿಕೊಳ್ಳುತ್ತ ಹೋದಂತೆ ಪ್ರತಿಷ್ಠಿತ ವಿಮರ್ಶಾ ವಲಯವು ಕೆಲವೊಮ್ಮೆ ಅನುಮಾನದಿಂದ, ಇನ್ನು ಕೆಲವೊಮ್ಮೆ ಪೂರ್ವಗ್ರಹದಿಂದ ನನ್ನ ಕೃತಿಗಳನ್ನು ನೋಡತೊಡಗಿತು. ಇದಕ್ಕೆ ಆಗ ನೆಲೆಯೂರಿದ್ದ ಸಿದ್ಧ ಮಾನದಂಡಗಳೂ ಕಾರಣವಿರಬಹುದು. ಹೀಗಾಗಿ, ನಾನು ವ್ಯಕ್ತಿ ನೆಲೆಯಲ್ಲಿ ಯಾವ ವಿಮರ್ಶಕರನ್ನೂ ಆಕ್ಷೇಪಿಸುವುದಿಲ್ಲ. ಅನುಮಾನ ಮತ್ತು ಪೂರ್ವಗ್ರಹಗಳಿಗೆ ಸಾಹಿತ್ಯ ಮತ್ತು ಚಳವಳಿ ಪ್ರಶ್ನೆಗಳ ಸಂಬಂಧಾಂತರಗಳು ತಾತ್ವಿಕತೆಯ ಸೂಕ್ತ ಚರ್ಚೆಗೆ ಒಳಪಡದೆ ಇದ್ದದ್ದೂ ಒಂದು ಕಾರಣ ಎಂದು ನಾನು ಭಾವಿಸಿರುವೆ. ಹೀಗಾಗಿ, ಯಾವ ವಿಮರ್ಶಕರನ್ನೂ ನಾನು ವೈಯಕ್ತಿಕ ನೆಲೆಯಲ್ಲಿ ಆಕ್ಷೇಪಿಸದೆ, ತಾತ್ವಿಕ ಭಿನ್ನಾಭಿಪ್ರಾಯಗಳ ಜೊತೆಯೇ ಸ್ನೇಹದಿಂದ ಬದುಕುತ್ತ ಬಂದಿದ್ದೇನೆ. ಹಾಗೆ ನೋಡಿದರೆ, ನನ್ನ ಕೃತಿಗಳ ಬಗ್ಗೆ ನನ್ನ ಅನಂತರದ ಪೀಳಿಗೆಯವರು ಮತ್ತು ಸಮಕಾಲೀನರು ಸಾಕಷ್ಟು ಬರೆದಿದ್ದಾರೆ. ಎಲ್ಲರೂ ಪೂರ್ವಗ್ರಹರೆಂದು ಕರೆದರೆ ಇವರನ್ನು ಅವಮಾನಿಸಿದಂತಾಗುತ್ತದೆ. ಸಿದ್ಧ ಮಾನದಂಡದ ಪ್ರತಿಷ್ಠಿತರಿಗೆ ಮಾತ್ರ ಪೂರ್ವಗ್ರಹವೆಂಬ ಮಾತು ಅನ್ವಯಿಸುತ್ತದೆ. ಈ ಪೂರ್ವಗ್ರಹಕ್ಕೂ ಜಡತಾತ್ವಿಕ ಕಾರಣಗಳಿರುತ್ತವೆ. ಆದರೆ, ಕಾಲ ಸರಿದಂತೆ ಇಂಥವರೂ ನನ್ನ ಕೃತಿಗಳ ಒಟ್ಟಾರೆ ಕೊಡುಗೆಯನ್ನು ಗುರುತಿಸಿದ್ದಾರೆ. ಕರ್ನಾಟಕದ